# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್ |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **181** |
| ಉತ್ತರಿಸಬೇಕಾದ ದಿನಾಂಕ | : | 05.07.2023 |
| ಉತ್ತರಿಸಬೇಕಾದ ಸಚಿವರು | : | ವಸತಿ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ವಸತಿ ಇಲಾಖೆ ವತಿಯಿಂದ ವಿವಿಧ ಯೋಜನೆಗಳಲ್ಲಿ ನಿರ್ಮಿಸಲಾಗಿರುವ ಮನೆಗಳ ಸಂಖ್ಯೆ ಎಷ್ಟು; | ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ಅಂದರೆ 2020-21ರಿಂದ 2022-23ರವರೆಗೆ ವಿವಿಧ ವಸತಿ ಯೋಜನೆಗಳಡಿ ಹಿಂದಿನ ಶ್ರೇಣಿಗಳಲ್ಲಿ ಪ್ರಗತಿಯಲ್ಲಿದ್ದ ಮನೆಗಳನ್ನು ಒಳಗೊಂಡಂತೆ ಒಟ್ಟು 4,42,086 ಮನೆಗಳನ್ನು ಪೂರ್ಣಗೊಳಿಸಲಾಗಿದೆ. |
| ಆ) | ಎಷ್ಟು ಜನ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ; ಹಂಚಿಕೆ ಮಾಡಲು ಬಾಕಿ ಇರುವ ಮನೆಗಳ ಸಂಖ್ಯೆ ಎಷ್ಟು | 2020-21ರಿಂದ 2022-23ರವರೆಗೆ ಸರ್ಕಾರವು ವಿವಿಧ ವಸತಿ ಯೋಜನೆಗಳಡಿ ಒಟ್ಟು 6,86,754 ಮನೆಗಳ ಗುರಿಯನ್ನು ಹಂಚಿಕೆ ಮಾಡಲಾಗಿದ್ದು, ಸರ್ಕಾರದ ಹಂತದಲ್ಲಿ ಹಂಚಿಕೆಗೆ ಬಾಕಿ ಇರುವುದಿಲ್ಲ.<br><br>ಸದರಿ ಮನೆಗಳ ಗುರಿಗೆ ಎದುರಾಗಿ ಈವರೆಗೆ ಒಟ್ಟು 3,56,229 ಮನೆಗಳಿಗೆ ಅನುಮೋದನೆ ನೀಡಲಾಗಿದ್ದು, 39,647 ಫಲಾನುಭವಿಗಳು ಆಯ್ಕೆಯಾಗಿ ವಿವಿಧ ಹಂತದ ಲಾಗಿನ್ ನಲ್ಲಿ ಅನುಮೋದನೆಗೆ ಬಾಕಿ ಇದ್ದು, ಇನ್ನೂಳಿದಂತೆ 2,90,878 ಫಲಾನುಭವಿಗಳು ಆಯ್ಕೆಗೆ GP/ULB ಹಂತಗಳಲ್ಲಿ ಆಯ್ಕೆಗೆ ಬಾಕಿ ಇರುತ್ತವೆ ವಿವರ ಈ ಕೆಳಗಿನಂತಿದೆ:<br><br>ಗುರಿ: 686754 — ಆಯ್ಕೆ& ಅನುಮೋದನೆ: 356229 — ಆಯ್ಕೆಯಾಗಿ GP/TP/ZP& ULB ಹಂತಗಳಲ್ಲಿ ಅನುಮೋದನೆಗೆ ಬಾಕಿ ಇರುವ ಮನೆಗಳು: 39647 — GP/ULB ಹಂತಗಳಲ್ಲಿ ಆಯ್ಕೆಗೆ ಬಾಕಿಯಿರುವ ಮನೆಗಳು: 290878<br><br>ಫಲಾನುಭವಿಗಳ ಆಯ್ಕೆಯನ್ನು ಗ್ರಾಮೀಣ ಪ್ರದೇಶದಲ್ಲಿ ಗ್ರಾಮಸಭೆ ಹಾಗೂ ನಗರ ಪ್ರದೇಶದಲ್ಲಿ ಮಾನ್ಯ ಶಾಸಕರ ಅಧ್ಯಕ್ಷತೆಯ ನಗರ ಆಶ್ರಯ ಸಮಿತಿ ಮೂಲಕ ಮಾಡಲಾಗುತ್ತಿದ್ದು, ಇನ್ನೂ ಆಯ್ಕೆಗೆ ಬಾಕಿ ಇರುವ ಒಟ್ಟು 2,90,878 ಫಲಾನುಭವಿಗಳನ್ನು ತ್ವರಿತವಾಗಿ ಆಯ್ಕೆ ಮಾಡಿ ಅನುಮೋದನೆ ಪಡೆದುಕೊಳ್ಳಲು ಕ್ರಮ ವಹಿಸಲಾಗುತ್ತಿದೆ. |

Nested table from answer (ಆ):

| ಗುರಿ | ಆಯ್ಕೆ& ಅನುಮೋದನೆ | ಆಯ್ಕೆಯಾಗಿ GP/TP/ZP& ULB ಹಂತಗಳಲ್ಲಿ ಅನುಮೋದನೆಗೆ ಬಾಕಿ ಇರುವ ಮನೆಗಳು | GP/ULB ಹಂತಗಳಲ್ಲಿ ಆಯ್ಕೆಗೆ ಬಾಕಿಯಿರುವ ಮನೆಗಳು |
|---|---|---|---|
| 686754 | 356229 | 39647 | 290878 |

| | | |
|---|---|---|
| ಇ) | ಬಾಕಿ ಉಳಿದಿರುವ ಮನೆ ನಿರ್ಮಾಣ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ ಬಡ ವರ್ಗಕ್ಕೆ ಅನುಕೂಲ ಮಾಡಿ ಕೊಡಲಾಗುವುದೇ ? | ಮೇಲ್ಕಂಡ ಯೋಜನೆಗಳಡಿ ಅನುಮೋದನೆಗೊಂಡ ಮನೆಗಳ ಪೈಕಿ ಈವರೆಗೆ 64,728 ಮನೆಗಳು ಪೂರ್ಣಗೊಂಡಿದ್ದು, 1,18,676 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ. ಇನ್ನುಳಿದಂತೆ 1,72,825 ಮನೆಗಳು ಪ್ರಾರಂಭವಾಗಬೇಕಿರುತ್ತದೆ.<br><br>• ವಸತಿ ಯೋಜನೆಗಳಡಿಯಲ್ಲಿ ಮನೆಗಳ ನಿರ್ಮಾಣವನ್ನು ಫಲಾನುಭವಿಗಳೇ ಸ್ವತಃ ನಿರ್ಮಿಸಿಕೊಳ್ಳುತ್ತಿದ್ದು, ಮನೆ ಕಾಮಗಾರಿಯನ್ನು ಪೂರ್ಣಗೊಳಿಸದೇ ನಿರ್ಮಾಣ ಹಂತದಲ್ಲಿ ಇರುವ ಮನೆಗಳ ಫಲಾನುಭವಿಗಳಿಗೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಅಧಿಕಾರಿಗಳ ಮುಖಾಂತರ ತಿಳುವಳಿಕೆ ಪತ್ರಗಳನ್ನು ನೀಡಿ ಹಾಗೂ ನೋಟೀಸ್ ಜಾರಿ ಮಾಡಿ ಶೀಘ್ರವಾಗಿ ಮನೆಗಳನ್ನು ನಿರ್ಮಿಸಿಕೊಳ್ಳಲು ಮನವೊಲಿಸಲಾಗುತ್ತಿದೆ.<br>• ಆಯ್ಕೆಗೆ ಬಾಕಿ ಇರುವ ಮನೆಗಳಿಗೆ ಫಲಾನುಭವಿಗಳ ಆಯ್ಕೆ ಮಾಡಿ ಅನುಮೋದನೆ ಪಡೆದುಕೊಳ್ಳಲು ಕಾಲಾವಕಾಶ ನಿಗದಿಪಡಿಸಲಾಗಿದೆ.<br>• ಕ್ಷೇತ್ರ ಭೇಟಿ ನೀಡಿ ಫಲಾನುಭವಿಗಳ ಮನವೊಲಿಸಿ ಮನೆಯನ್ನು ಪೂರ್ಣಗೊಳಿಸಿಕೊಳ್ಳಲು ಸೂಚನೆ ನೀಡಲಾಗುತ್ತಿದೆ.<br><br>ಒಟ್ಟಾರೆಯಾಗಿ ಮನೆಗಳನ್ನು ಪೂರ್ಣಗೊಳಿಸಲು ಎಲ್ಲಾ ರೀತಿಯ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ವಇ 158 ಹೆಚ್‌ಎಎಂ 2023

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು